ಕರ್ನಾಟಕ ಸರ್ಕಾರ

(ಸಾರಿಗೆ ಇಲಾಖೆ)

ಸಂ:ಸಾಆ:ನೋಂದಣಿ-2/ಪಿಆರ್-111/14-15

ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ರವರ ಕಛೇರಿ,
'ಎ' ಬ್ಲಾಕ್, 1ನೇ ಮಹಡಿ, ಟಿ.ಟಿ.ಎಂ.ಸಿ. ಕಟ್ಟಡ,
ಬಿ.ಎಂ.ಟಿ.ಸಿ. ಸಂಕೀರ್ಣ, ಶಾಂತಿನಗರ,
ಬೆಂಗಳೂರು, ದಿನಾಂಕ: 14-03-2022

## ಆದೇಶ

ವಿಷಯ : ಕರ್ನಾಟಕ ಮೋಟಾರು ವಾಹನ ನಿಯಮಾವಳಿ-1989ಕ್ಕೆ ತಿದ್ದುಪಡಿ ಮಾಡಿ ನಿಯಮ-46(A)ಗೆ ಹೊಸದಾಗಿ ಉಪ ನಿಯಮ-46(AA)ಅನ್ನು ಸೇರ್ಪಡೆ ಮಾಡಿ, ಸರ್ಕಾರವು ಹೊರಡಿಸಿರುವ ಅಧಿಸೂಚನೆ ಮೇರೆಗೆ **KA-53/MK** ಮುಂಗಡ ಶ್ರೇಣಿಯನ್ನು ಪ್ರಾರಂಭಿಸಿ ನೋಂದಣಿ ಸಂಖ್ಯೆಗಳನ್ನು ಬಹಿರಂಗ ಹರಾಜು ಪ್ರಕ್ರಿಯೆ ಮೂಲಕ ಹಂಚಿಕೆ ಮಾಡುವ ಬಗ್ಗೆ.

ಉಲ್ಲೇಖ :1)ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಾರಿಇ/60/ಸಾಇಪ/2014, ದಿನಾಂಕ:29.05.2014 ಮತ್ತು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿರುವ ದಿ:07.08.2014.

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂದಿಸಿದಂತೆ ದಿನಾಂಕ.14-03-2022 ರಂದು **KA-53/MK** ಮುಂಗಡ ಶ್ರೇಣಿಯ ನೋಂದಣಿ ಸಂಖ್ಯೆಗಳನ್ನು ಬಹಿರಂಗ ಹರಾಜನ್ನು ನಡೆಸಲು ಪ್ರಕಟಿಸಲಾಗಿತ್ತು. ಆದರೆ ಬಹಿರಂಗ ಹರಾಜಿಗೆ ಸಾರ್ವಜನಿಕರು ನಿಗದಿತ ಪ್ರಮಾಣದಲ್ಲಿ ಹಾಜರಾಗದಿರುವುದರಿಂದ ಮತ್ತು ರಾಜಸ್ವ ಸಂಗ್ರಹದ ಹಿತದೃಷ್ಟಿಯಿಂದ ದಿನಾಂಕ 14-03-2022 ರಂದು ಪ್ರಕಟಿಸಲಾದ ಷರತ್ತನ್ನು ಮುಂದುವರೆಸುತ್ತಾ **ದಿನಾಂಕ-22-03-2022 ರ ಮಧ್ಯಾಹ್ನ 3:00 ಗಂಟೆಗೆ ಸಾರಿಗೆ ಆಯುಕ್ತರ ಕಛೇರಿಯಲ್ಲಿ** 1ನೇ ಮಹಡಿ, ಟಿಟಿಎಂಸಿ ಕಟ್ಟಡ, ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು ಇಲ್ಲಿ ನಡೆಸಲಾಗುತ್ತದೆ.

ಸಾರ್ವಜನಿಕರು ಮೇಲೆ ನಿಗಧಿಪಡಿಸಿದ ದಿನಾಂಕದಂದು ನಿದಿರ್ಷ್ಟಪಡಿಸಿದ ಸಮಯಕ್ಕೆ ಮೊದಲು ಹಾಜರಾಗಿ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ತಿಳಿಸಿದೆ.

ಅಪರ ಸಾರಿಗೆ ಆಯುಕ್ತರು,
(ಪ್ರವರ್ತನ)(ದಕ್ಷಿಣ), ಬೆಂಗಳೂರು

**ಇವರಿಗೆ**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಕಳುಹಿಸುತ್ತಾ, ಸದರಿ ಅಧಿಸೂಚನೆಯನ್ನು ಮುಂದಿನ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ, ಅದರ 200 ಪ್ರತಿಗಳನ್ನು ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತರು, ಬೆಂಗಳೂರು ಇವರಿಗೆ ಕಳುಹಿಸಿಕೊಡುವಂತೆ ಕೋರಲಾಗಿದೆ.

**ಪ್ರತಿಗಳು :**

6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
7. ಅಪರ ಸಾರಿಗೆ ಆಯುಕ್ತರು, ಪರಿಸರ ಮತ್ತು ಇ ಆಡಳಿತ ಇವರಿಗೆ ಇಲಾಖೆಯ ಅಧಿಕೃತ ವೈಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
8. ರಾಜ್ಯದ ಎಲ್ಲಾ ಪ್ರಾದೇಶಿಕ/ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
9. ಎಲ್ಲಾ ಅಪರ ಮತ್ತು ಜಂಟಿ ಸಾರಿಗೆ ಆಯುಕ್ತರುಗಳಿಗೆ ಮಾಹಿತಿಗಾಗಿ.
10. ಕಛೇರಿ ಪ್ರತಿ.